ಹೇಳಿಕೆಯನ್ನು ವಿರೋಧಿಸುತ್ತೇನೆ. ತಾವು ಸರಿಯಾದ ಪ್ರಾಮಾಣಿಕವಾದ ತೀರ್ಮಾನವನ್ನು ತೆಗೆದುಕೊಂಡಿಲ್ಲವೆಂದು ಹೇಳಿ ನಾನು ಸಭಾತ್ಯಾಗ ಮಾಡುತ್ತೇನೆ. ಇದು ಸರಿಯಲ್ಲ, ನಿಜವಾಗಿಯೂ, ಇದು ನೋವಾದ ಪ್ರಸಂಗ. ಅತ್ಯಂತ ನೋವಿನಿಂದ ಈ ಸಭಾತ್ಯಾಗ ಮಾಡುತ್ತಿದ್ದೇನೆ.

(ಮಾನ್ಯ ಸದಸ್ಯರಾದ ವಾಟಾಳ್ ನಾಗರಾಜ್‌ರವರು ಸಭಾತ್ಯಾಗ ಮಾಡಿದರು)

ಅಧ್ಯಕ್ಷರು:- ಈಗ ಶೂನ್ಯವೇಳೆಯು ಸಮಾಪ್ತವಾಯಿತು. ಈಗ ತಾವು ಒಂದು ಪ್ರಸ್ತಾವನೆ ಮಾಡಬೇಕು.

ದ ಅ ॥ ಪ್ರಸ್ತಾವನೆಗೆ ಅನುಮತಿ ಕೋರಿಕೆ

ಶ್ರೀ ಎಂ. ವೀರಪ್ಪಮೊಯಿಲಿ:- ಸನ್ಮಾನ್ಯ ಅಧ್ಯಕ್ಷರೇ, 1991ನೇ ಸಾಲಿನ ಕರ್ನಾಟಕ ಆಡಳಿತಾತ್ಮಕ ಪ್ರಕ್ರಿಯೆ ವಿಧೇಯಕಕ್ಕೆ ಸಂಬಂಧಿಸಿದಂತೆ ರಚಿಸಲಾದ ಜಂಟಿ ಪರಿಶೀಲನಾ ಸಮಿತಿಯ ವರದಿಯನ್ನು ಸಲ್ಲಿಸಲು 31 ನೇ ಜೂನ್ 1993 ರ ವರೆಗೆ ಕಾಲಾವಧಿಯನ್ನು ವಿಸ್ತರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು:- ಪ್ರಸ್ತಾವನೆಯೆಂದರೆ 1991ನೇ ಸಾಲಿನ ಕರ್ನಾಟಕ ಆಡಳಿತಾತ್ಮಕ ಪ್ರಕ್ರಿಯೆ ವಿಧೇಯಕಕ್ಕೆ ಸಂಬಂಧಿಸಿದಂತೆ ರಚಿಸಲಾದ ಜಂಟಿ ಪರಿಶೀಲನಾ ಸಮಿತಿಯ ವರದಿಯನ್ನು ಸಲ್ಲಿಸಲು 31ನೇ ಜೂನ್ 1993ರ ವರೆಗೆ ಕಾಲಾವಧಿಯನ್ನು ವಿಸ್ತರಿಸಲು ಅನುಮತಿ ನೀಡುವುದು.

ಪ್ರಸ್ತಾಪ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು.

ದ ಅ ॥ ವಿತ್ತೀಯ ಕಾರ್ಯಕಲಾಪ

1993-94ನೇ ಸಾಲಿನ ಸಂಬಂಧಿಸಿದ ಬೇಡಿಕೆಗಳ ಮೇಲಿನ ಚರ್ಚೆ(ಮುಂದುವರೆದುದು)

ಶ್ರೀಮತಿ ಪೋಟಮ್ಮ:- ಸನ್ಮಾನ್ಯ ಅಧ್ಯಕ್ಷರೇ, ಇವತ್ತು ಏನು 28 ಇಲಾಖೆ ಬೇಡಿಕೆಗಳನ್ನು ಸದನದ ಮುಂದೆ ಮಂಡಿಸಿದ್ದಾರೆ ಅದನ್ನು ಸ್ವಾಗತ ಮಾಡುತ್ತಾ.....

ಶ್ರೀ ಆರ್. ವಿ. ದೇಶಪಾಂಡೆ:- ಮಾನ್ಯ ಮುಖ್ಯ ಮಂತ್ರಿಗಳೇ, ಈ ಒಂದು ಮೆಸೇಜ್ ಬಂದಿದೆ ನಮ್ಮ ಅಶ್ವತ್ಥನಾರಾಯಣ ರೆಡ್ಡಿಯವರು, ನಮ್ಮ ಪಕ್ಷದ ಬೆಂಗಳೂರು ಘಟಕದ ಅಧ್ಯಕ್ಷರು, ತಮಗೆ ಗೊತ್ತು ವರ್ತೂರು ಕಾನ್‌ಸ್ಟಿಯನ್ಸಿಯಲ್ಲಿ ಸೈಟ್‌ಗಳನ್ನು ಕೊಡುವ ವಿಚಾರದಲ್ಲಿ ಒಂದು ಎಜಿಟೇಷನ್ ನಡೆಯುತ್ತಿದೆ. ಪುನಃ ಅವರನ್ನು ಪೋಲೀಸಿನವರು ಅರೆಸ್ಟ್ ಮಾಡಿಕೊಂಡು ಹೋಗಿರುತ್ತಾರೆ. ಹಾಗಾಗಿ ತಮ್ಮ ತಮ್ಮ ಸರ್ಕಾರ ಡೆಮಾಕ್ರೆಟಿಕಲಿ agitation ಮಾಡುವವರನ್ನು ಬಂಧಿಸುವುದಿಲ್ಲ ಎಂದು ಭಾವಿಸುತ್ತೇನೆ. ಹಾಗಾಗಿ ತಾವು ಇಮೆಡಿಯೇಟ್ಲಿ ಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ:- ಮಾನ್ಯ ಅಧ್ಯಕ್ಷರೇ ಸಿದ್ಯಯ್ಯ ರೋಡಿನಲ್ಲಿ ಒಂದು ಶಾಲಾ ಕಟ್ಟಡ ಬಿದ್ದು ಹೋಗಿ ಇಬ್ಬರು ಮಕ್ಕಳು ಸತ್ತಿದ್ದಾರೆ, ನೂರಾರು ಮಕ್ಕಳಿಗೆ ಗಾಯವಾಗಿವೆ ಎಂದು ತಿಳಿದುಬಂದಿದೆ. ಇದರ ಬಗ್ಗೆ ತಾವು ಏನು ಕ್ರಮ ತೆಗದುಕೊಂಡಿದ್ದೀರಾ ಅದನ್ನ ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀಮತಿ ಪೋಟಮ್ಮ:(ಮೂಡಿಗೆರೆ) ಸನ್ಮಾನ್ಯ ಅಧ್ಯಕ್ಷರೇ, ಇವತ್ತು ಸಭೆಯ ಮುಂದೆ 47 ಬೇಡಿಕೆಗಳನ್ನು ಏನು ಮಂಡಿಸಿದ್ದಾರೆ ಅದರಲ್ಲಿ ಎಲ್ಲಾ ಬೇಡಿಕೆಗಳ ಬಗ್ಗೆ ಚರ್ಚೆ ಮಾಡದೆ ಕೆಲವೇ ಬೇಡಿಕೆಗಳ ಬಗ್ಗೆ ಮಾತ್ರ ನಾನು ಮಾತನಾಡುವುದಕ್ಕೆ ಇಷ್ಟಪಡುತ್ತೇನೆ. ಜೊತೆಗೆ ಈ ದಿನ ನನಗೆ ಚರ್ಚೆ ಮಾಡುವುದಕ್ಕೆ ಮನಸ್ಸು ಇಲ್ಲ. ಆದರೆ ಹೆಸರು ಕೊಟ್ಟು ಹೆಸರು ಕರೆದಾಗ ನಾನು ಇಲ್ಲಿ ಕುಳಿತುಕೊಂಡು ಮಾತನಾಡುವುದಿಲ್ಲವೆಂದರೆ ಸರಿಹೋಗುವುದಿಲ್ಲವೆಂದು ಕೆಲವೇ ಮಾತುಗಳನ್ನು ಆಡುವುದಕ್ಕೆ ಇಷ್ಟಪಡುತ್ತೇನೆ. ಮೊದಲನೆಯದಾಗಿ ಜಿಲ್ಲಾಪರಿಷತ್ತಿನ ಬಗ್ಗೆ ನಾನು ಪ್ರಸ್ತಾಪ ಮಾಡಲಿಕ್ಕೆ ಇಷ್ಟಪಡುತ್ತೇನೆ. ಜಿಲ್ಲಾ ಪರಿಷತ್ತಿನಲ್ಲಿ ನಾವು ಬಹಳ ಮುಖ್ಯವಾಗಿ ನೋಡಬೇಕಾಗಿರುವುದು ಕುಡಿಯುವ ನೀರು, ರಸ್ತೆ, ಪಶ್ಚಿಮಘಟ್ಟಗಳ ಯೋಜನೆಗಳು, ಮನೆ